# ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 198 ಅಮುಕಾ 2021

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ: 9.6.2021

## ಸುತ್ತೋಲೆ

ವಿಷಯ: ಕೋವಿಡ್-19 ಲಸಿಕೆಯ ಪ್ರತಿ ಡೋಸ್‌ಗೆ ಗರಿಷ್ಠ ದರ ನಿಗದಿಪಡಿಸುವ ಕುರಿತು.

ಉಲ್ಲೇಖ: 1. ಸುತ್ತೋಲೆ ಸಂಖ್ಯೆ: ಆಕುಕ 72 ಸಿಜಿಇ 2021, ದಿನಾಂಕ: 03.05.2021
2. ಸುತ್ತೋಲೆ ಸಂಖ್ಯೆ: ಆಕುಕ 72 ಸಿಜಿಇ 2021, ದಿನಾಂಕ: 27.5.2021
3. ಆಕುಕ ಮಂತ್ರಾಲಯ, ಭಾರತ ಸರ್ಕಾರದ ಕಚೇರಿ ಜ್ಞಾಪನ ಪತ್ರ ಸಂಖ್ಯೆ: F.No.2079203/2021/Immunization, ದಿನಾಂಕ: 8.6.2021.

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (1)ರ ದಿನಾಂಕ: 3.5.2021 ರ ಸುತ್ತೋಲೆಯಲ್ಲಿ ಲಸಿಕಾ ತಯಾರಕರು ಖಾಸಗಿ ಆರೋಗ್ಯ ಸಂಸ್ಥೆಗಳಿಗೆ ನಿಗದಿಪಡಿಸಲಾದ ದರದ ಜೊತೆಗೆ ಪ್ರತಿ ಡೋಸ್‌ಗೆ ರೂ.100/-(ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ ಮಾರ್ಗಸೂಚಿಯಂತೆ) ಸೇವಾ ಶುಲ್ಕವಾಗಿ ಪಡೆಯಲು ಸೂಚನೆ ನೀಡಲಾಗಿತ್ತು. ಆದರೆ, ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಸಂಘವು ಸಲ್ಲಿಸಿದ್ದ ಮನವಿಯನ್ನು ಸರ್ಕಾರವು ಪರಿಶೀಲಿಸಿ, ಪ್ರತಿ ಡೋಸ್‌ಗೆ ಸೇವಾ ಶುಲ್ಕವನ್ನು ರೂ.200/- ರಂತೆ ಪರಿಷ್ಕರಿಸಿ ಉಲ್ಲೇಖ (2)ರ ದಿನಾಂಕ: 27.5.2021ರ ಸುತ್ತೋಲೆಯಲ್ಲಿ ನಿಗದಿಪಡಿಸಲಾಗಿತ್ತು.

ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯವು ದಿನಾಂಕ: 8.6.2021ರ ಉಲ್ಲೇಖ (3)ರ ಕಚೇರಿ ಜ್ಞಾಪನ ಪತ್ರದಲ್ಲಿ ವಿವಿಧ ಕೋವಿಡ್-19 ಲಸಿಕೆಗಳ ದರವನ್ನು ಪ್ರತಿ ಲಸಿಕೆಯ ಡೋಸ್‌ಗೆ ಎಲ್ಲಾ ತೆರಿಗೆ ಹಾಗೂ ಸೇವಾ ಶುಲ್ಕ (ರೂ.150/- ಒಬ್ಬ ವ್ಯಕ್ತಿಗೆ) ಸೇರಿ ಈ ಕೆಳಕಂಡಂತೆ ನಿಗದಿಪಡಿಸಲಾಗಿರುತ್ತದೆ :

1. ಕೋವಿಶೀಲ್ಡ್ - ರೂ.780/-
2. ಕೋವ್ಯಾಕ್ಸಿನ್ - ರೂ.1,410/-
3. ಸ್ಪುಟ್ನಿಕ್ ವಿ - ರೂ.1,145/-



Mail Sent 9/6/21

ಈ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರದಿಂದ ಹೊರಡಿಸಲಾದ ದಿನಾಂಕ:3.5.2021 ಮತ್ತು 27.5.2021ರ ಉಲ್ಲೇಖ (1) ಮತ್ತು (2) ರ ಸುತ್ತೋಲೆಗಳನ್ನು ಹಿಂಪಡೆಯಲಾಗಿದ್ದು, ಎಲ್ಲಾ ಖಾಸಗಿ ಆರೋಗ್ಯ ಸಂಸ್ಥೆಗಳು ಭಾರತ ಸರ್ಕಾರವು ನಿಗದಿಪಡಿಸಿರುವ ದರಗಳನ್ನು ಅನುಸರಿಸಲು ಸೂಚಿಸಲಾಗಿದೆ.

(ಜಾವೇದ್ ಅಖ್ತರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

**ಇವರಿಗೆ:**

1. ಮುಖ್ಯ ಆಯುಕ್ತರು, ಬಿಬಿಎಂಪಿ, ಬೆಂಗಳೂರು.
2. ಎಲ್ಲಾ ಜಿಲ್ಲಾಧಿಕಾರಿಗಳು
3. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
4. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
5. ಎಲ್ಲಾ ಜಿಲ್ಲಾ ಶಸ್ತ್ರಚಿಕಿತ್ಸಕರು
6. ಎಲ್ಲಾ ಖಾಸಗಿ ಆರೋಗ್ಯ ಸಂಸ್ಥೆಗಳು

**ಪ್ರತಿ ಮಾಹಿತಿಗಾಗಿ** :

1. ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ
3. ಆಯುಕ್ತರು, ಆಕುಕ ಸೇವೆಗಳು
4. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ
5. ನಿರ್ದೇಶಕರು, ಆಕುಕ ಸೇವೆಗಳು
6. ನಿರ್ದೇಶಕರು, ವೈದ್ಯಕೀಯ ಶಿಕ್ಷಣ
7. ಮಾನ್ಯ ಆಕುಕ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ